“ಶಾಲೆಯ ಪಾಠ ಪಠ್ಯಗಳನ್ನು ಮಾತ್ರ ಇಂಗ್ಲಿಷ್ನಲ್ಲಿ ಕಲಿತರೆ ಸಾಲದು. ವಿದೇಶಗಳಿಗೆ ಹೋದಾಗ ವ್ಯವಹರಿಸುವುದು ಮಕ್ಕಳಲ್ಲಿ ಸಹಜವಾಗಿ ಬರಬೇಕಿದ್ದರೆ ಇಂಗ್ಲಿಷ್ನಲ್ಲಿಯೇ ಮಾತನಾಡಬೇಕು. ಈಗ ನೋಡಿ, ನಾವು ಕನ್ನಡ ಮಾಧ್ಯಮದಲ್ಲಿ ಓದಿ, ಇಂಗ್ಲಿಷ್ ಮೀಡಿಯಂ ಮಕ್ಕಳಿಗೆ ಪಾಠ ಮಾಡುವುದು ಎಷ್ಟು ಕಷ್ಟವಾಗುತ್ತದೆ. ಆದ್ದರಿಂದ ಇಂಗ್ಲಿಷ್ನಲ್ಲಿಯೇ ಮಾತನಾಡುವುದಕ್ಕೆ ಮಕ್ಕಳಿಗೆ ಹೇಳುತ್ತೇನೆ’’ ಎನ್ನುತ್ತಾರೆ ಸುನೀತಾ. ಅವರ ಮಾತಿನಲ್ಲಿ ವ್ಯವಹಾರ ಚಾತುರ್ಯದ ಜೊತೆಗೆ, ಅಮ್ಮ ಏನು ಹೇಳಿದರೂ ಅದು ಮಕ್ಕಳ ಹಿತಕ್ಕಾಗಿಯೇ ಅಲ್ಲವೇ ಎನ್ನುವ ಧೋರಣೆಯೂ ಕಾಣಿಸುತ್ತದೆ.

## ಮಕ್ಕಳ ಮೇಲೆ ಪೋಷಕರ ಬದುಕಿನ ಭಾರ!

ತಮ್ಮ ಮಕ್ಕಳು ಚೆನ್ನಾಗಿ ಇಂಗ್ಲಿಷ್ ಕಲಿಯಬೇಕು ಎಂದು ಹಂಬಲಿಸುವವರನ್ನು ಮಾತನಾಡಿಸಿದರೆ, ಅವರಲ್ಲಿ ಬಹುತೇಕರು ತಮ್ಮ ಜೀವನದಲ್ಲಿ ಭಾಷೆಯ ಕಾರಣದಿಂದಾಗಿ ಅನುಭವಿಸಿದ ಅವಮಾನಗಳನ್ನು ನೆನಪಿಸಿಕೊಳ್ಳುತ್ತಾರೆ. ತಮ್ಮ ಇಂಗ್ಲಿಷ್ ಚೆನ್ನಾಗಿದ್ದಿದ್ದರೆ ಬದುಕು ಕೂಡ ಇನ್ನಷ್ಟು ಚೆನ್ನಾಗಿರುತ್ತಿತ್ತು ಎಂದು ನಂಬುವವರೂ ಇದ್ದಾರೆ. ತನ್ನ ಜೊತೆಗೇ ಡಿಪ್ಲೊಮಾ ಮಾಡಿದ ಗೆಳೆಯನೊಬ್ಬನ ಅಂಕಪಟ್ಟಿಯಲ್ಲಿ ತನಗಿಂತಲೂ ಕಡಿಮೆ ಅಂಕಗಳಿದ್ದರೂ – ಇಂಗ್ಲಿಷ್ ಚೆನ್ನಾಗಿದೆ ಎನ್ನುವ ಕಾರಣಕ್ಕಾಗಿ ಅವನಿಗೆ ಹೆಚ್ಚಿನ ಅವಕಾಶಗಳು ದೊರೆತುದುದರ ಕಥೆಯನ್ನು ಆನೇಕಲ್‌ನ ವೆಂಕಟೇಶ್ ತುಂಬಾ ಸೊಗಸಾಗಿ ಹೇಳುತ್ತಾರೆ.

ಯಾವುದೇ ಒಂದು ಪದವಿ ಓದಿ ಕೆಲಸ ಹುಡುಕಲು ಶುರು ಮಾಡುವಾಗ, ಸಂಸ್ಥೆಗಳಲ್ಲಿ ಮೊದಲ ಬೇಡಿಕೆ – ‘ಇಂಗ್ಲಿಷ್ ಗೊತ್ತಿರಬೇಕು’ ಎನ್ನುವುದು. ಅಂದಮೇಲೆ, ಮಕ್ಕಳನ್ನು ಆ ವಾತಾವರಣಕ್ಕೆ ಸಜ್ಜು ಮಾಡುವುದು ಮುಖ್ಯವಲ್ಲವೇ ಎನ್ನುವುದು ಅನೇಕರ ಪ್ರಶ್ನೆ.

ಕನ್ನಡ ಮಾಧ್ಯಮದಲ್ಲಿ ಓದಿ, ಇಂಗ್ಲಿಷ್ ವಾತಾವರಣದಲ್ಲಿ ತಾವು ಎದುರಿಸುವ ಅವಮಾನಗಳನ್ನು ತಮ್ಮ ಮಕ್ಕಳೂ ಎದುರಿಸುವಂತಾಗಬಾರದು ಎನ್ನುವುದು ಹೆಚ್ಚಿನ ಪೋಷಕರ ಕಾಳಜಿ. ಆ ಕಾರಣದಿಂದಾಗಿಯೇ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಸೇರಿಸಲು ಬಯಸುತ್ತಾರೆ. ಖಾಸಗಿ ಶಾಲೆಗಳಲ್ಲಿ ಶುಲ್ಕ ಹೆಚ್ಚು, ಡೊನೇಷನ್ ಬೇರೆ, ಶೂ–ಯೂನಿಫಾರ್ಮ ಎಂದು ಪಟ್ಟಿ ಮಾಡತೊಡಗಿದರೆ – ‘ಪರವಾಗಿಲ್ಲ, ಹೇಗೋ ಹಣ ಹೊಂದಿಸೋಣ. ಇಷ್ಟೆಲ್ಲ ದುಡಿಯುವುದು ಮಕ್ಕಳ ನಾಳೆಗಳು ಚೆನ್ನಾಗಿರಬೇಕು ಎನ್ನುವ ಕಾರಣಕ್ಕಾಗಿ ಅಲ್ಲವೇ?’ ಎನ್ನುತ್ತಾರೆ ಅನಸೂಯಮ್ಮ. ಚಿತ್ರದುರ್ಗ ಜಿಲ್ಲೆಯ ಪುಟ್ಟ ಊರೊಂದರ ಅವರು ಸದ್ಯಕ್ಕೆ ಬೆಂಗಳೂರು ನಿವಾಸಿ. ಗಾರ್ಮೆಂಟ್ಸ್ ಉದ್ಯೋಗಿ. ಅವರ ಗಂಡ ಖಾಸಗಿ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿ. ಈ ದಂಪತಿ ತಮ್ಮ ಒಬ್ಬನೇ ಮಗನನ್ನು ಕಾನ್ವೆಂಟ್‌ಗೆ ಹಾಕಿದ್ದಾರೆ. ಮನೆಯ ಬಾಡಿಗೆ, ಮಗನ ಶಾಲೆಗೆ ಹಣ ಹೊಂದಿಸಿ ತಿಂಗಳ ರೇಷನ್ ಸರಿದೂಗಿಸುವ ಹೊತ್ತಿಗೆ ಪ್ರತಿ ತಿಂಗಳೂ ಈ ಕುಟುಂಬದ್ದು ಖೋತಾ ಬಜೆಟ್. ‘ಇವತ್ತು ಕಷ್ಟಪಟ್ಟರೆ ನಾಳೆ ನನ್ನ ಕಂದನ ಜೀವನ ಸುಧಾರಿಸುತ್ತದೆ’ ಎನ್ನುವಾಗ ಅನಸೂಯಮ್ಮನ ಕಣ್ಣುಗಳಲ್ಲಿ ಅಪೂರ್ವ ಕಾಂತಿಯೊಂದು ಕಾಣಿಸಿಕೊಳ್ಳುತ್ತದೆ.

ಅನಸೂಯಮ್ಮ ಮಾತ್ರವಲ್ಲ, ಸಣ್ಣಪುಟ್ಟ ಊರುಗಳಿಂದ ಬಂದು ನಗರಗಳಲ್ಲಿ ನೆಲೆ ಕಂಡುಕೊಳ್ಳಲು ಹೆಣಗುತ್ತಿರುವ ಬಹುತೇಕರು ತಮ್ಮ ಇಂದಿನ ಬದುಕಿನೊಂದಿಗೆ ಮಕ್ಕಳ ನಾಳೆಗಳನ್ನು ಬೆಸೆದುಕೊಂಡಿದ್ದಾರೆ. ಸಾಲ ಮಾಡಿಯಾದರೂ ಮಕ್ಕಳನ್ನು ಒಳ್ಳೆಯ ಶಾಲೆಗಳಲ್ಲಿ ಓದಿಸಬೇಕು ಎಂದು ಹೆಣಗುತ್ತಿದ್ದಾರೆ. ಅವರ ಸುಂದರ ಸ್ವಪ್ನಗಳಲ್ಲಿ ಸರ್ಕಾರಿ ಶಾಲೆಗಳಿಗೆ ಸ್ಥಳವಿಲ್ಲ.

## ಭಿನ್ನ-ಸವಾಲಿನ ದಾರಿಯ ಪಥಿಕರು

ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಿಂದಲೇ ತಮ್ಮ ಮಕ್ಕಳ ಭವಿಷ್ಯ ಉಜ್ವಲವಾಗಿರಲು ಸಾಧ್ಯ ಎನ್ನುವ ಪೋಷಕರ ಸಂಖ್ಯೆಯೇ ಹೆಚ್ಚಾಗಿರುವ ಸಂದರ್ಭದಲ್ಲಿ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರಿ ಶಾಲೆಗಳನ್ನು ಆಯ್ದುಕೊಳ್ಳುವ ಪಾಲಕರೂ ಇದ್ದಾರೆ. ಅವರಿಗೆ, ತಮ್ಮ ಮಕ್ಕಳನ್ನು ಒಳ್ಳೆಯ ಶಾಲೆಗಳಲ್ಲಿ ಓದಿಸುವ ಆರ್ಥಿಕ ಅನುಕೂಲವಿದೆ. ಆದರೂ ಸರ್ಕಾರಿ ಶಾಲೆಯಲ್ಲಿ ತಮ್ಮ ಮಕ್ಕಳು ಓದಬೇಕು ಎನ್ನುವ ಪ್ರಜ್ಞಾಪೂರ್ವಕ ನಿರ್ಧಾರ ಅವರದು.

ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ ಈ ಪೋಷಕರು ಸುಮ್ಮನಾಗುವುದಿಲ್ಲ. ಶಾಲೆಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಶ್ರಮಿಸುತ್ತಾರೆ. ಶಾಲಾಭಿವೃದ್ಧಿ ಸಮಿತಿಯಲ್ಲಿ ಸೇರಿಕೊಂಡು, ಶಾಲೆಯಲ್ಲಿನ ತರಗತಿಗಳು ಸರಿಯಾಗಿ ನಡೆಯುವಂತೆ ಗಮನಹರಿಸುತ್ತಾರೆ. ತಮ್ಮ ಮಕ್ಕಳು ಶಾಲೆಯಲ್ಲಿ

